ಕರ್ನಾಟಕ ಸರ್ಕಾರ

**ಆಯುಕ್ತರಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗರಸ್ತೆ, ಬೆಂಗಳೂರು-01**

ಸಂಖ್ಯೆ:ಇ-ಆಡಳಿತ:ಮಂ.ಹು.ಪ:01/2020-21 ದಿನಾಂಕ:-10-09-2020

-: ಜ್ಞಾಪನಾ :-

ವಿಷಯ:- ಶಾಲಾವಾರು ಮಂಜೂರಾದ ಹುದ್ದೆ, ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಮಾಹಿತಿ ಹಾಗೂ ಖಾಲಿ ಹುದ್ದೆ ಮಾಹಿತಿ ಪರಿಶೀಲನೆ ಮಾಡುವ ಬಗ್ಗೆ.

ಉಲ್ಲೇಖ:-1) ಈ ಕಛೇರಿ ಜ್ಞಾಪನ ಸಮ ಸಂಖ್ಯೆ ದಿನಾಂಕ.02.09.2020

2) ಈ ಕಛೇರಿ ಜ್ಞಾಪನ ಸಮ ಸಂಖ್ಯೆ ದಿನಾಂಕ.09.09.2020

------

2020-21 ನೇ ಸಾಲಿನ ವರ್ಗಾವಣಾ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕಾಗಿರುವುದರಿಂದ ಜಿಲ್ಲೆಗಳಲ್ಲಿ ಬಾಕಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಯಿಂದ ಪ್ರೌಢಶಾಲಾ ಶಿಕ್ಷಕರ ಹುದ್ದೆಗೆ ಪದೋನ್ನತಿ ನೀಡುವ ಪ್ರಕ್ರಿಯೆಯನ್ನು ದಿನಾಂಕ.16.09.2020 ರೊಳಗೆ ಪೂರ್ಣಗೊಳಿಸಲು ಉಲ್ಲೇಖ(2)ರ ಪತ್ರದಲ್ಲಿ ತಿಳಿಸಲಾಗಿದೆ.

ಮುಂದುವರೆದು, ಪದೋನ್ನತಿ ಪ್ರಕ್ರಿಯೆಯನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಿ ಉಲ್ಲೇಖ(1)ರ ಜ್ಞಾಪನದಲ್ಲಿ ಸೂಚಿಸಿರುವ ಅಂಶಗಳಂತೆ ಶಾಲೆಗಳಲ್ಲಿ ಹಿಂದಿನ ಸಾಲಿನ ವರ್ಗಾವಣೆ ಸಂದರ್ಭದಲ್ಲಿ ನೀಡಿದ ಮಂಜೂರಾದ ವಿಷಯಾವಾರು ಹುದ್ದೆಗಳು, ಆಯಾ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಪ್ರಾಥಮಿಕ ಮಾಹಿತಿಯನ್ನು ಪರಿಶೀಲಿಸಿ ಪ್ರಸ್ತುತ ದಿನಾಂಕದಲ್ಲಿದ್ದಂತೆ ಇಂದೀಕರಿಸುವ ಕಾರ್ಯವನ್ನು ದಿನಾಂಕ. 25.09.2020 ರೊಳಗೆ ಪೂರ್ಣಗೊಳಿಸಲು ಸೂಚಿಸಿದೆ.

**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

**ರವರಿಗೆ,**

1. ರಾಜ್ಯದಎಲ್ಲಾಜಿಲ್ಲಾಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತ ಕ್ರಮಕ್ಕಾಗಿ
2. ರಾಜ್ಯದಎಲ್ಲಾ ತಾಲ್ಲೂಕುಗಳ ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತ ಕ್ರಮಕ್ಕಾಗಿ

**ಪ್ರತಿಯನ್ನು:-**

1. ಅಪರಆಯುಕ್ತರು, ಧಾರವಾಡ ಮತ್ತುಕಲ್ಬುರ್ಗಿಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
2. ನಿರ್ದೇಶಕರು(ಪ್ರಾಥಮಿಕ ಶಿಕ್ಷಣ), ಆಯುಕ್ತರಕಛೇರಿ, ಬೆಂಗಳೂರು., ಇವರಿಗೆ ಮಾಹಿತಿಗಾಗಿ
3. ನಿರ್ದೇಶಕರು(ಪ್ರೌಢ ಶಿಕ್ಷಣ), ಆಯುಕ್ತರಕಛೇರಿ, ಬೆಂಗಳೂರು, ಇವರಿಗೆ ಮಾಹಿತಿಗಾಗಿ
4. ಕಛೇರಿ ಪ್ರತಿ.